**ಪಿ.ಡಬ್ಲ್ಯೂ-1**

ದಿನಾಂಕಃ **10-11-2025** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು 2 ನೇ ಎದುರುದಾರರ ಪರವಾಗಿ ಶ್ರೀ ಕೆ.ಎಂ.ಎಸ್.ಎನ್. ವಕೀಲರಿಂದಃ-

2 ನೇ ಅರ್ಜಿದಾರರ ಮದುವೆಯಾಗಿ 8 ವರ್ಷ ಆಗಿವೆ. 3 ನೇ ಅರ್ಜಿದಾರರ ಮದುವೆಯಾಗಿ 5 ವರ್ಷ ಆಗಿವೆ. 4 ನೇ ಅರ್ಜಿದಾರರಿಗೆ 24 ವರ್ಷ ಇದೆ. ಅಪಘಾತ ಆದ ದಿನ ನನ್ನ ಗಂಡ ಬೈಕ್ ನಲ್ಲಿ ಹೋಗುತ್ತಿದ್ದರು. ಅದು ನನ್ನ ಗಂಡನಿಗೆ ಸೇರಿದ್ದು ಆ ಬಗ್ಗೆ ದಾಖಲೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಆ ಬೈಕ್ ನ ವಿಮೆಯಾಗಲೀ, ನನ್ನ ಗಂಡನ ಡಿ.ಎಲ್ ಆಗಲೀ ಹಾಜರುಪಡಿಸಿಲ್ಲ. ನನ್ನ ಗಂಡನ ಬಳಿ ಡಿ.ಎಲ್. ಇತ್ತು. ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನಮ್ಮ ಮನೆಯಿಂದ ಅಪಘಾತವಾದ ಸ್ಥಳ 2-3 ಕಿ.ಮೀ. ಆಗುತ್ತದೆ. ಯಾರೋ ಬೇರೆಯವರು ನಮಗೆ ಅಪಘಾತದ ಬಗ್ಗೆ ತಿಳಿಸಿದರು, ಅರಸೀಕೆರೆ ಆಸ್ಪತ್ರೆಯಲ್ಲಿ ತೋರಿಸಿದ ನಂತರ ಹಾಸನದ ಎಸ್.ಎಸ್.ಎಂ. ಆಸ್ಪತ್ರೆಗೆ ಸೇರಿಸಿರುತ್ತೇವೆ. ಅಪಘಾತ ಆದ ನಂತರ ನಾವೆಲ್ಲ ನೋಡಲು ಹೋಗಿದ್ದೆವು. ಮಾರನೇ ದಿನ ದೂರು ಸಲ್ಲಿಸಿರುತ್ತೇವೆ. ಆಧಾರ್ ಕಾರ್ಡ್ ಪ್ರಕಾರ ನನ್ನ ಗಂಡನಿಗೆ 54 ವರ್ಷ ಎಂದರೆ ಸರಿಯಲ್ಲ. ಅಪಘಾತ ಆಗಿ 2 ವರೆ ವರ್ಷಗಳ ನಂತರ ನನ್ನ ಗಂಡ ಮೃತಪಟ್ಟಿರುತ್ತಾರೆ. ಹಾಸನದ ಆಸ್ಪತ್ರೆಯಲ್ಲಿ 3 ತಿಂಗಳ ಕಾಲ ಇದ್ದರು. ನನ್ನ ಗಂಡ ಒಳರೋಗಿಯಾಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಅನುಸರಣ ಚಿಕಿತ್ಸೆಗೆ ಹೋಗಿದ್ದೆವು ಆ ಬಗ್ಗೆ ದಾಖಲೆಗಳು ಇಲ್ಲ. ನಿಪಿ-6 ರಲ್ಲಿ ಸಿ.ಎಸ್.ಟಿ. , ಜಿ.ಎಸ್.ಟಿ. ನಂಬರ್ ಇಲ್ಲ ಮತ್ತು ದಿನಾಂಕ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆಸ್ಪತ್ರೆಯ ದಾಖಲೆಗಳಲ್ಲಿ ದಿನಾಂಕವನ್ನು ದಿಃ22-01-2021 ಎಂದು ತಿದ್ದುಪಡಿ ಮಾಡಿ ಸಹಿ ಹಾಕಿಲ್ಲ ಎಂದರೆ ನನಗೆ ಗೊತ್ತಿಲ್ಲ. 2020 ನ್ನು 2021 ಎಂದು ತಿದ್ದುಪಡಿ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಸದರಿ ದಾಖಲೆ ಎಸ್ಟಿಮೇಶನ್ ಬಿಲ್ ಎಂದರೆ ಗೊತ್ತಿಲ್ಲ. ನನ್ನ ಗಂಡ ಬಿಡುಗಡೆಯಾದ ದಿನಾಂಕವನ್ನು ಅದರಲ್ಲಿ ನಮೂದಿಸಿಲ್ಲ ಎಂದರೆ ಗೊತ್ತಿಲ್ಲ. ನಿಪಿ-35 ರಲ್ಲಿ 40 ಸಾವಿರ, ನಿಪಿ-55 ರಲ್ಲಿ 30 ಸಾವಿರ, ನಿಪಿ-57

ರಲ್ಲಿ 35 ಸಾವಿರ, ನಿಪಿ-68 ರಲ್ಲಿ 50 ಸಾವಿರ, ನಿಪಿ-73 ರಲ್ಲಿ 45 ಸಾವಿರ ಒಟ್ಟು 2 ಲಕ್ಷ ರೂ.ಗಳನ್ನು ಮುಂಗಡ ಹಣ ಎಂದು ಕಟ್ಟಿರುತ್ತೇವೆಂದರೆ ಗೊತ್ತಿಲ್ಲ. ಸದರಿ ಹಣವನ್ನು ನಿಪಿ-6 ರಲ್ಲಿ ನಮೂದಿಸಿದ ಹಣವನ್ನು ಕಳೆಯಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ನಿಪಿ-6 ಫೈನಲ್ ಬಿಲ್ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ಕೆಲವು ಬಿಲ್ಲುಗಳು ( ನಿಪಿ-6, 24, 40, 48, 51, 83, 95, 157) ಗಳನ್ನು ಉದ್ದೇಶಪೂರ್ವಕವಾಗಿ ಡಬಲ್ ಬಿಲ್ಲುಗಳನ್ನು ಹಾಕಿರುತ್ತೇವೆಂದರೆ ಗೊತ್ತಿಲ್ಲ. ನಿಪಿ-88, 89, 137 ಎಲ್ಲಾ ಒಂದೇ ಬಿಲ್ಲುಗಳಿದ್ದು 3 ಬಿಲ್ಲುಗಳಾಗಿ ತೋರಿಸಿದ್ದೇವೆಂದರೆ ಗೊತ್ತಿಲ್ಲ. ಅಪಘಾತ ಆಗಿ ಡಿಸ್ ಚಾರ್ಜ್ ಆದ ನಂತರ ನನ್ನ ಗಂಡ ಮೃತಪಡುವವರೆಗೂ ಯಾವುದೇ ಆಸ್ಪತ್ರೆಯ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಚಿಕಿತ್ಸೆಗಾಗಿ 7 ಲಕ್ಷ ರೂ.ಗಳನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆಸ್ಪತ್ರೆಯ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇವೆಂದರೆ ಸರಿಯಲ್ಲ.

ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದರು. ಅವರಿಗೆ ದಿನಕ್ಕೆ 900/- ರೂ. ಕೂಲಿ ಸಿಗುತ್ತಿತ್ತು. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನ್ನ ಬಳಿ ಬಿ.ಪಿ.ಎಲ್. ಕಾರ್ಡ್ ಇತ್ತು. ನನ್ನ ಗಂಡನ ತಪ್ಪಿನಿಂದ ಅಪಘಾತ ಆಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡನೇ ಅಪಘಾತಕ್ಕೆ ಕಾರಣ ಎಂದರೆ ಸರಿಯಲ್ಲ. ನನ್ನ ಗಂಡ ಅಪಘಾತದಿಂದ ಆದ ಗಾಯಗಳಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗನ ಜೊತೆ ವಾಸವಿದ್ದೇನೆ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

( ಕಿರಣ್ ಕುಮಾರ್ ಡಿ. ವಡಿಗೇರಿ )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.**10-11-2025.**